CC No.:637/2018
P.W.:1

ಈ ದಿನ ದಿಃ13.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ಶ್ರೀ ಜೆ.ಹೆಚ್.ಕೆ ವಕೀಲರಿಂದಃ-**

ಆರೋಪಗೆ ಕಳುಹಿಸಿರುವ ನೋಟಿಸ್ಸಿನಲ್ಲಿರುವ ವಿಳಾಸ ಮತ್ತು ನಿಪಿ-10 ರಿಂದ 31 ರ ಬಿಲ್ಲುಗಳಲ್ಲಿರುವ ವಿಳಾಸ ಬೇರೆ ಬೇರೆ ಇದೆ ಎಂದರೆ ನನಗೆ ಗೊತ್ತಿಲ್ಲ. ಮೊಬೈಲ್ ವ್ಯವಹಾರವನ್ನು ಹೊರತುಪಡಿಸಿ ಬೇರೆ ವ್ಯವಹಾರವನ್ನು ಮಾಡುತ್ತಿದ್ದೇವೆ. ಬೇರೆ ಬೇರೆ ಪ್ರೊಡಕ್ಟ್ ಗಳನ್ನು ಮಾರಾಟ ಮಾಡುತ್ತೇವೆ. ನಾವು ಮಾಡುವ ಎಲ್ಲಾ ವ್ಯವಹಾರ ಒಂದೇ ಜಿ.ಎಸ್‌ಟಿ ನಂಬರ್ ನಲ್ಲಿ ಮಾಡುತ್ತೇವೆ. ಮೊಬೈಲ್ ವ್ಯವಹಾರ ಮಾಡಲು ಪರವಾನಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ವ್ಯವಹಾರ ನಡೆಸಲು ಒಂದೇ ಪರವಾನಿಗೆ ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ.

ನಿಪಿ-7 ರಲ್ಲಿ ಮೊಬೈಲ್ ಮಾರಾಟಕ್ಕೆ ಎಂದು ಪರವಾನಿಗೆಯಲ್ಲಿ ನಿಖರವಾಗಿ ನಮೂದಿಸಿರುವುದಿಲ್ಲ, ಹಾಲು ಮತ್ತು ಅದರ ಉತ್ಪನ್ನಗಳ ಮಾರಾಟಕ್ಕೆಂದು ಪರವಾನಿಗೆ ಇದೆ ಎಂದರೆ ಸಾಕ್ಷಿಯು ಅದೇ ಪರವಾನಿಗೆ ಅಡಿಯಲ್ಲಿ ಎಲ್ಲಾ ವ್ಯವಹಾರ ಮಾಡಬಹುದು ಎಂದು ನಮ್ಮ ಅಡಿಟರ್ ಹೇಳಿದ್ದರಿಂದ ವ್ಯವಹಾರ ಮಾಡುತ್ತಿದ್ದೇವೆಂದು ನುಡಿಯುತ್ತಾರೆ. ಹಾಲು ಉತ್ಪನ್ನಗಳ ಮಾರಾಟಕ್ಕೆ ಪರವಾನಿಗೆ ಪಡೆದು ಮೊಬೈಲ್ ವಿತರಣೆ ಸದರಿ ಪರವಾನಿಗೆ ಅಡಿಯಲ್ಲಿ ಮಾರಾಟ ಮಾಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಪಿ-9 ರಲ್ಲಿ ವ್ಯವಹಾರದ ಸ್ವರೂಪವನ್ನು ನಮೂದಿಸಿಲ್ಲ ಎಂದರೆ ನಾನು ಅದನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು

ಆರೋಪಿಯೊಂದಿಗೆ ಮೊಬೈಲ್ ಮಾರಾಟ ಪ್ರಾರಂಭ ಮಾಡಿ ಯಾವ ದಿನಾಂಕದಂದು ಕೊನೆಯ ವ್ಯವಹಾರ ಆರೋಪಿಯೊಂದಿಗೆ ಮಾಡಿರುತ್ತೇನೆಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಿಪಿ-10 ರಿಂದ 31 ಬಿಲ್ಲುಗಳನ್ನು ಹೊರತುಪಡಿಸಿ ಆರೋಪಿಗೆ ಸಂಬಂಧಿಸಿದ ಬೇರೆ ಬಿಲ್ಲುಗಳು ಇವೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಕಚೇರಿಯನ್ನು ವರ್ಗಾಯಿಸಿದ ನಂತರ ನಮ್ಮ ಕಚೇರಿಯಲ್ಲಿ ಎಷ್ಟು ಬಿಲ್ಲುಗಳು ಇವೆಯೇ ಅಷ್ಟು ಬಿಲ್ಲುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ.

ನಮ್ಮ ವ್ಯವಹಾರದಲ್ಲಿ ಲೆಡ್ಜರ್ ಆಫ್ ಅಕೌಂಟ್ ನ್ನು ನಿರ್ವಹಿಸುತ್ತೇವೆ ಎಂದರೆ ಸರಿ. ಸದರಿ ಲೆಡ್ಜರ್ ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಬಳಿ ಇರುವ ಸಾಕ್ಷ್ಯವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ನಿಪಿ-10 ರಿಂದ 31 ರ ವರೆಗಿನ ಒಟ್ಟು ಮೊತ್ತವನ್ನು ನ್ಯಾಯಾಲಯಕ್ಕೆ ನನಗೆ ಹೇಳಲು ಬರುವುದಿಲ್ಲ. ಸದರಿ ನಿಪಿ-10 ರಿಂದ 31 ರ ಬಿಲ್ಲುಗಳ ಒಟ್ಟು ಮೊತ್ತ ರೂ.14, 48,425/- ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ-82 ರಿಂದ 87 ರ ವರೆಗಿನ ಚೆಕ್ಕುಗಳಲ್ಲಿ ನಮೂದಿಸಿರುವ ಮೊತ್ತಗಳನ್ನು ಆರೋಪಿ ಎನ್.ಇ.ಎಫ್.ಟಿ ಮೂಲಕ ನಮಗೆ ಸಂದಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-82 ರಿಂದ 87 ರ ಚೆಕ್ಕುಗಳನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಚೆಕ್ಕುಗಳನ್ನು ಬ್ಯಾಂಕಿಗೆ ಸಲ್ಲಿಸುವ ಪೂರ್ವದಲ್ಲಿ ಆರೋಪಿಯನ್ನು ಸಂಪರ್ಕಿಸಿದಾಗ ಆರೋಪಿಯ ಕೋರಿಕೆಯ ಮೇರೆಗೆ ಸದರಿ ಚೆಕ್ಕುಗಳನ್ನು ಬ್ಯಾಂಕಿಗೆ ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-82 ರಿಂದ 86 ರ ವರೆಗಿನ ಚೆಕ್ಕುಗಳಲ್ಲಿ ನಮೂದಿಸಿರುವ ಮೊತ್ತ

ಎನ್.ಇ.ಎಫ್.ಟಿ ಮೂಲಕ ನಮ್ಮ ಖಾತೆಗೆ ಜಮಾ ಆಗಿರುವ ಕುರಿತು ನ್ಯಾಯಾಲಯಕ್ಕೆ ಸಲ್ಲಿಸಿರುವ ನಿಪಿ-88 ರಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ.

ನಿಪಿ-87 ರ ಚೆಕ್ಕಿಗೆ ಸಂಬಂಧಿಸಿದಂತಹ 50 ಸಾವಿರ ಮೊತ್ತವನ್ನು ಪೊಲೀಸರೊಂದಿಗೆ ವಾರೆಂಟ್ ಜಾರಿ ಕುರಿತಾಗಿ ಹೋದಾಗ ಆರೋಪಿಯಿಂದ ಪಡೆದಿರುತ್ತೇನೆಂದರೆ ಸರಿಯಲ್ಲ. ನಿಪಿ-88 ರ ಪ್ರಕಾರ ಆರೋಪಿ ದಿ.25.07.2017 ರಿಂದ ದಿ.20.12.2017 ರ ವರೆಗೆ ಒಟ್ಟು ರೂ.13,78,059/- ಸಂದಾಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖಾತೆಗೆ ಜಮೆಯಾದ ಒಟ್ಟು ಮೊತ್ತ ರೂ.13,78,059/- ಹಾಗೂ ವಾರೆಂಟ್ ಕಾಲಕ್ಕೆ ಪಡೆದ ರೂ.50 ಸಾವಿರ ಮತ್ತು 1,60,000/- ಮೊತ್ತದ ಮೊಬೈಲ್ ಗಳನ್ನು ವಾಪಸ್ಸು ಪಡೆದಿದ್ದರ ಕುರಿತಾಗಿ ಒಟ್ಟು ರೂ.15,88,059/- ಮೊತ್ತವನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ನಾವೇ ರೂ.30 ಸಾವಿರ ಹಿಂದಿರುಗಿಸಬೇಕಾಗಿರುತ್ತದೆ ಎಂದರೆ ಸರಿಯಲ್ಲ. ವಾರೆಂಟ್ ಜಾರಿ ಕಾಲಕ್ಕೆ ಪಡೆದ ರೂ.50 ಸಾವಿರ ಮತ್ತು ರೂ.1,60,000/- ಮೊತ್ತದ ಸ್ಟಾಕ್ ನ್ನು ಆರೋಪಿಯಿಂದ ಪಡೆದ ಬಗ್ಗೆ ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಆರೋಪಿ ನಮ್ಮ ವಿತರಣ ಕೇಂದ್ರಕ್ಕೆ ಯಾವುದೇ ಹಣ ನೀಡುವುದು ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-1 ನ್ನು ಆರೋಪಿ ವ್ಯವಹಾರದ ಸಂದರ್ಭದಲ್ಲಿ ಭದ್ರತೆಗಾಗಿ ರೂ.50,000/- ಎಂದು ನಮೂದಿಸಿ ನಮ್ಮ ಸಂಸ್ಥೆಗೆ ನೀಡಿದ್ದು, ಸದರಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು 50 ಸಾವಿರ ಇದ್ದುದ್ದನ್ನು ರೂ.4,50,000/- ಎಂದು ಬರೆದು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

CC No.:637/2018
P.W.:1

ನಿಪಿ-32 ರಿಂದ 82 ರ ದಾಖಲೆಗಳು ಆರೋಪಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸದರಿ ದಾಖಲೆಗಳು ನಮ್ಮ ಮತ್ತು ಕಂಪನಿಯ ನಡುವಿನ ವ್ಯವಹಾರದ ದಾಖಲೆಗಳಾಗಿರುತ್ತವೆಂದು ನುಡಿಯುತ್ತಾರೆ. ಆರೋಪಿ ರೂ.4,50,000/- ಹಣ ನೀಡಲು ಬಾದ್ಯಸ್ಥನಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.